<u>OS No.1031/2022</u>
<u>PW-1</u>

**<u>ಸಾಕ್ಷಿ ಯನ್ನು ದಿನಾಂಕ: 01.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

ಈ ದಿನ ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ವಕೀಲರು ನನಗೆ ಓದಿ ತಿಳಿಸಿರುತ್ತಾರೆ. ಆದ್ದರಿಂದ, ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆ ಎಂದು ಪರಿಗಣಿಸಬೇಕಾಗಿ ಕೋರುತ್ತೇನೆ.

**<u>ಮುಖ್ಯ ವಿಚಾರಣೆ :- ವಾದಿ ಪರ ವಕೀಲರಿಂದಃ</u>**

ಕ್ರಯದ ಕರಾರು ಪತ್ರವನ್ನು ನಿ.ಪಿ-1 ಎಂದು, ದಿಃ10.03.2022 ರ ಕ್ರಯಪತ್ರದ ನಕಲನ್ನು ನಿ.ಪಿ-2 ಎಂದು, 2 Assessment Demand Registrar ಪ್ರತಿಯನ್ನು ನಿ.ಪಿ-3 ಮತ್ತು 4 ಎಂದು, ತಿಳುವಳಿಕೆ ನೋಟೀಸ್ ಅನ್ನು ನಿ.ಪಿ-5 ಎಂದು, 2 ಅಂಚೆ ರಶೀದಿಯನ್ನು ನಿ.ಪಿ-6 ಮತ್ತು 7 ಎಂದು, ಅಂಚೆ ಜ್ಞಾಪನ ಪತ್ರವನ್ನು ನಿ.ಪಿ-8 ಮತ್ತು 9 ಎಂದು, ಜವಾಬು ನೋಟೀಸ್ ಅನ್ನು ನಿ.ಪಿ-10 ಎಂದು ಗುರುತಿಸಲಾಯಿತು.

1 ನೇ ಪ್ರತಿವಾದಿ ಏಕಪಕ್ಷ ಮತ್ತು 2 ನೇ ಪ್ರತಿವಾದಿ ಗೈರುಹಾಜರಾಗಿರುವ ಕಾರಣ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**